(ಇಂದು ದಿನಾಂಕ 24.01.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**ಪಾಟೀ ಸವಾಲು:- ಪ್ರತಿವಾದಿ ಪರ ವಕೀಲರಿಂದ:-**

ನನ್ನ ತಾಯಿಯ ಹೆಸರು ನಾಗಮ್ಮ. ನನ್ನ ತಾಯಿ ಕಾಡಜಕ್ಕನಹಳ್ಳಿಯ ವಾಸಿ ಎಂದರೆ ಸರಿಯಲ್ಲ. ನನ್ನ ತಾಯಿ ಮೈಸೂರಮ್ಮನದೊಡ್ಡಿಯಲ್ಲಿ ವಾಸವಾಗಿದ್ದಾರೆ. ನನ್ನ ತಾಯಿಗೆ 3 ಜನ ಮಕ್ಕಳು ಎಂದರೆ ಸರಿಯಲ್ಲ. ಲಕ್ಷ್ಮಮ್ಮ ನನ್ನ ಸಹೋದರಿ ಎಂದರೆ ಸರಿಯಲ್ಲ, ಅವರು ಕಾಡಜಕ್ಕನಹಳ್ಳಿ ವಾಸವಾಗಿದ್ದಾರೆ ಎಂದರೆ ಸರಿಯಲ್ಲ. ನನ್ನ ತಂದೆಯ ಹೆಸರು ಮುನಿಯಪ್ಪ ಎಂದರೆ ಸರಿಯಲ್ಲ. ಸರ್ವೆ ನಂ.114/ಪಿ18 ರಲ್ಲಿ 20 ಗುಂಟೆ ಜಮೀನು ನನ್ನ ಹೆಸರಿನಲ್ಲಿ ಇದೆ ಎಂದರೆ ಸರಿಯಲ್ಲ. ನಾನು ಅಸಲು ದಾವೆ ಸಂಖ್ಯೆ 515/2015 ರಂತೆ ದಾವೆ ಹೂಡಿದ್ದೇನೆ ಎಂದರೆ ಸರಿ. ಸದರಿ ದಾವೆಯನ್ನು ಹಾರಗದ್ದೆ ಪಂಚಾಯಿತಿ ಹಾಗೂ 3 ನೇ ಪ್ರತಿವಾದಿಯ ವಾರಸುದಾರರ ವಿರುದ್ಧ ಹೂಡಿದ್ದೇನೆ. ಸದರಿ ನ್ಯಾಯಾಲಯಕ್ಕೆ ಈಗ ತೋರಿಸುತ್ತಿರುವ ದಾಖಲೆಯನ್ನು ಹಾಜರುಪಡಿಸಿದ್ದೇನೆ, ಅದನ್ನು ಸಾಕ್ಷಿ ಒಪ್ಪಿದ ಮೇರೆಗೆ ಅದನ್ನು **<u>ನಿಡಿ 1</u>** ಎಂದು ಗುರುತಿಸಲಾಯಿತು. ಸರ್ಕಾರದವರು ನನ್ನ ಮ್ಯುಟೇಶನ್ ಆದೇಶ ಮಾಡಿದ್ದಾರೆ ಎಂದರೆ ಸರಿಯಲ್ಲ. ಈಗ ನನಗೆ ತೋರಿಸುತ್ತಿರುವ ದಾಖಲೆ ನಾನು ಸದರಿ ಜಮೀನನ್ನು ಬ್ಯಾಂಕಿಗೆ ಅಡಮಾನ ಮಾಡಿಕೊಟ್ಟ ಪತ್ರ ಸದರಿ ದಾಖಲೆಯನ್ನು ನಿಡಿ 2 ಎಂದು ಗುರುತಿಸಲಾಯಿತು. ಸರ್ವೆ ನಂ.114/ಪಿ18 ನ್ನು ಈ ದಾವೆಯಲ್ಲಿ ಸೇರಿಸಿಲ್ಲ, ಸಾಕ್ಷಿ ಅದು ನನ್ನ ಹೆಸರಿನಲ್ಲಿ ಪಹಣಿ ಇಲ್ಲ ಎನ್ನುತ್ತಾರೆ, ಸದರಿ ಜಮೀನನ್ನು ಪಿ.ರವೀಂದ್ರ ಎನ್ನುವವರಿಗೆ ಮಾರಾಟ ಮಾಡಿದ್ದೇನೆ ಎಂದರೆ ಸರಿಯಲ್ಲ. ನೊಸೆನೂರು ಗ್ರಾಮದಲ್ಲಿ ಒಂದು ಮನೆ ಇದೆ, ಆ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ. ದಾವಾ ಆಸ್ತಿಗಳು 3 ನೇ ಪ್ರತಿವಾದಿಯ ಗಂಡನಿಗೆ ಸೇರಿದ ಆಸ್ತಿಗಳು ಎಂದರೆ ಸರಿ. ನಾನು ಕಾಡುಜಕ್ಕನಹಳ್ಳಿಯ ಮುನಿಯಪ್ಪನ ಮಗ ರುದ್ರಪ್ಪ ರೆಡ್ಡಿಯ ತಂದೆ ವೆಂಕಟರಮಣರೆಡ್ಡಿಯ ಮಗ ಅಲ್ಲ ಎಂದರೆ ಸರಿಯಲ್ಲ. ಮತದಾರರ ಪಟ್ಟಿಯಲ್ಲಿ ನನ್ನ ಹೆಸರಿನ ಪಕ್ಕ ನನ್ನ ತಾಯಿಯದ್ದಾಗಲೀ ತಂಗಿಯದ್ದಾಗಲೀ ಇಲ್ಲ ಎಂದರೆ ಸರಿ. ಲಕ್ಷ್ಮಮ್ಮ ಹಾಗೂ ನಾಗಮ್ಮನ ಹೆಸರು ಕಾಡಜಕ್ಕನಹಳ್ಳಿಯ ಮತದಾರರ ಪಟ್ಟಿಯಲ್ಲಿ ಇದೆ ಎಂದರೆ ಸರಿಯಲ್ಲ. ವಂಶವೃಕ್ಷವನ್ನು ಸೃಷ್ಟಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ.

**(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ ಮೇರೆಗೆ ಮುಂದೂಡಲಾಯಿತು)**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)**

ಓದಿ ಹೇಳಿ ಕೇಳಿ ಸರಿ ಇದೆ.

2 ನೇ ಅಪರ ಹಿರಿಯ ಸಿ.ಜೆ. ಮತ್ತು ಜೆ.ಎಂ.ಎಫ್.ಸಿ,
ಆನೇಕಲ್.